# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು- 572 103

ಸಭಾ ಸಂಖ್ಯೆ: ವಿ.ಸಿಂ-05 ದಿನಾಂಕ: 21.07.2023 ಸಮಯ: ಅಪರಾಹ್ನ: 3:00

## 2022-23ನೇ ಸಾಲಿನ ಐದನೇ ವಿಶೇಷ ಸಿಂಡಿಕೇಟ್ ಸಭೆಯ ಕಾರ್ಯಸೂಚಿಗಳು

| ಕ್ರ ಸಂ | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ಪುಟ ಸಂಖ್ಯೆ |
|---|---|---|---|
| | | **ಸಿಂಡಿಕೇಟ್ ವಿಭಾಗ** | |
| 1. | 2022-23.ವಿ.ಸಿಂ-05 ಸಿಂ.ವಿ.01 | ತುಮಕೂರು ವಿಶ್ವವಿದ್ಯಾನಿಲಯದ ಹದಿನಾರನೇ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪ್ರಧಾನ ಮಾಡುವ ಸಂಬಂಧ ಅಭ್ಯರ್ಥಿಗಳ ಪಟ್ಟಿಯನ್ನು ಶಿಫಾರಸ್ಸು ಮಾಡುವ ಕುರಿತು. | 1 |
| | | **ಪರೀಕ್ಷಾಂಗ ವಿಭಾಗ** | |
| 2. | 2022-23.ವಿ.ಸಿಂ-05 ಪ.ವಿ-01 | Mr. Samartha Raghava Nagabhushanam ಇವರಿಗೆ ತಾತ್ಕಾಲಿಕ ಡಿ.ಲಿಟ್ ಪದವಿ ಘೋಷಿಸಿ ಅಧಿಸೂಚನೆ ಹೊರಡಿಸುವ ಕುರಿತು. | 2 |
| | | **ಪಿ.ಹೆಚ್.ಡಿ. ವಿಭಾಗ** | |
| 3. | 2022-23.ವಿ.ಸಿಂ-03 ಪಿಹೆಚ್.ಡಿ. ವಿ-01 | 2015-16ನೇ ಸಾಲಿನ ಸಂಶೋಧನಾರ್ಥಿಗಳ ಪಿಹೆಚ್.ಡಿ. ಸಂಶೋಧನೆಯ ಅವಧಿ ವಿಸ್ತರಿಸುವ ಕುರಿತು. | 3 |
| | | **ಅಭಿವೃದ್ಧಿ ವಿಭಾಗ** | |
| 4. | 2022-23.ವಿ.ಸಿಂ-05 ಅಭಿವೃದ್ಧಿ ವಿಬಾಗ-01 | ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದಲ್ಲಿ ಕಂಪ್ಯೂಟರ್ ಆಪರೇಟರ್ ಆಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಪ್ರವೀಣ್‌ಕುಮಾರ್ ಟಿ., (ತಾತ್ಕಾಲಿಕ) ಇವರ ಸೇವೆಯನ್ನು ಮುಂದುವರೆಸಿರುವ ಕ್ರಮದ ಸ್ಥಿರೀಕರಣದ ಕುರಿತು. | 4 |
| 5. | 2022-23.ವಿ.ಸಿಂ-05 ಅಭಿವೃದ್ಧಿ ವಿಬಾಗ-02 | ತುಮಕೂರು ವಿಶ್ವವಿದ್ಯಾನಿಲಯವು, ತುಮಕೂರು ಸ್ಮಾರ್ಟ್‌ಸಿಟಿಯೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವ ಸ್ಥಿರೀಕರಣದ ಕುರಿತು. | 5 |
| 6. | 2022-23.ವಿ.ಸಿಂ-05 ಅಭಿವೃದ್ಧಿ ವಿಬಾಗ-03 | ವಿಶ್ವವಿದ್ಯಾನಿಲಯದ ಇನ್‌ಕ್ಯುಬೇಷನ್ ಸೆಂಟರ್‌ಗೆ ಸಲಹೆಗಾರರನ್ನು ನೇಮಿಸುವ ಕುರಿತು. | 6 |
| | | **ಕ್ರೀಡಾ ವಿಭಾಗ** | |
| 7. | 2022-23.ವಿ.ಸಿಂ-05 ಕ್ರೀಡಾ ವಿಭಾಗ-01 | ದಿನಾಂಕ 04.07.2023 ರಂದು ನಡೆದ ತುಮಕೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದ 2022-23ನೇ ಸಾಲಿನ ಕ್ರೀಡಾ ಸಲಹಾ ಸಮಿತಿ ಸಭಾ ನಡಾವಳಿಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವ ಕುರಿತು. | 7 |
| | | **ಶೈಕ್ಷಣಿಕ ವಿಭಾಗ** | |
| 8. | 2022-23.ವಿ.ಸಿಂ-05 ಶೈ.ವಿಭಾಗ-01 | ತುಮಕೂರು ವಿಶ್ವವಿದ್ಯಾನಿಲಯವು JD INSTITUTE OF FASHION TECHNOLOGY ಇವರೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆ ಕುರಿತು. | 8 |
| | | **ಸಿಬ್ಬಂದಿ ವಿಭಾಗ** | |
| 9. | 2022-23.ವಿ.ಸಿಂ-05 ಸಿಬ್ಬಂದಿ ವಿಭಾಗ-01 | ಜವಾಹರಲಾಲ್ ನೆಹರು ವಿಶ್ವವಿದ್ಯಾನಿಲಯ ಇಲ್ಲಿ ಪ್ರಾಧ್ಯಾಪಕರ ಹುದ್ದೆಗೆ ನೇಮಕಗೊಂಡ ಡಾ. ರಮೇಶ್ ಎಸ್., ಸಹಾಯಕ ಪ್ರಾಧ್ಯಾಪಕರು, ಇವರನ್ನು ವಿಶ್ವವಿದ್ಯಾನಿಲಯದ ಸೇವೆಯಿಂದ ಬಿಡುಗಡೆಗೊಳಿಸಿರುವುದನ್ನು ಸ್ಥಿರೀಕರಿಸುವ ಕುರಿತು. | 9 |

| ವಿಷಯ ಸಂಖ್ಯೆ: | 2022-23:ಸಿಂ.ವಿ-01:ವಿ.ಸಿಂ-05 ದಿನಾಂಕ: 21.07.2023 |
|---|---|

ವಿಷಯ: ತುಮಕೂರು ವಿಶ್ವವಿದ್ಯಾನಿಲಯದ ಹದಿನಾರನೇ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪ್ರಧಾನ ಮಾಡುವ ಸಂಬಂಧ ಅಭ್ಯರ್ಥಿಗಳ ಪಟ್ಟಿಯನ್ನು ಶಿಫಾರಸ್ಸು ಮಾಡುವ ಕುರಿತು.

ಉಲ್ಲೇಖ:
1) ಕರ್ನಾಟಕ ರಾಜ್ಯಪಾಲರ ಸಚಿವಾಲಯದ ಪತ್ರ ಸಂಖ್ಯೆ: ಜಿಎಸ್ 02 ಜಿಯುಎಂ 2016, ದಿನಾಂಕ 18.02.2016
2) ಕರ್ನಾಟಕ ರಾಜ್ಯಪಾಲರ ಸಚಿವಾಲಯದ ಪತ್ರ ಸಂಖ್ಯೆ : ಜಿಎಸ್ 03 ಜಿಯುಎಂ 2020 ದಿನಾಂಕ : 11.02.2023
3) ಕರ್ನಾಟಕ ರಾಜ್ಯಪಾಲರ ಸಚಿವಾಲಯದ ಪತ್ರ ಸಂಖ್ಯೆ : ಜಿಎಸ್ 04 ಜಿಯುಎಂ 2023 ದಿನಾಂಕ : 17.07.2023

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 05.08.2023 ರಂದು ತುಮಕೂರು ವಿಶ್ವವಿದ್ಯಾನಿಲಯದ 16ನೇ ವಾರ್ಷಿಕ ಘಟಿಕೋತ್ಸವವನ್ನು ಆಯೋಜಿಸಲು ಘನತೆವೆತ್ತ ಕುಲಾಧಿಪತಿಗಳ ಅನುಮೋದನೆಯನ್ನು ನೀಡಿರುತ್ತಾರೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 69ರನ್ವಯ ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಸಾಹಿತ್ಯ, ತತ್ವಜ್ಞಾನ, ಕಲೆ, ಸಂಗೀತ, ವರ್ಣಚಿತ್ರಕಲೆ ಅಥವಾ ಕಲೆ, ಸಮಾಜಸೇವೆ, ವಿಜ್ಞಾನ ಅಥವಾ ತಂತ್ರಜ್ಞಾನದ ವ್ಯಾಸಂಗ ವಿಭಾಗಗಳಿಗೆ ವಹಿಸಿಕೊಡಲಾಗಿರುವ ಯಾವುದೇ ಇತರೆ ವಿಷಯದಲ್ಲಿ ಮುನ್ನಡೆಗಾಗಿ ಗಣನೀಯ ಕೊಡುಗೆ ನೀಡಿದ ಅಥವಾ ಶಿಕ್ಷಣದ ಧ್ಯೇಯಗಳಿಗಾಗಿ ವಿಶಿಷ್ಟ ಸೇವೆ ಸಲ್ಲಿಸಿದ ವ್ಯಕ್ತಿಗಳನ್ನು ಗುರುತಿಸಿ ಅಂತಹ ಮಹನೀಯರಿಗೆ ಗೌರವ ಡಾಕ್ಟರೇಟ್ ಪ್ರಧಾನ ಮಾಡಬೇಕಾಗಿದೆ.

ಉಲ್ಲೇಖಿತ ಘನತೆವೆತ್ತ ಕುಲಾಧಿಪತಿಗಳ ನಿರ್ದೇಶನದಂತೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲು ತುಮಕೂರು ವಿಶ್ವವಿದ್ಯಾನಿಲಯಕ್ಕೆ ಸ್ವೀಕೃತವಾದ ಅರ್ಜಿಗಳನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ, ಸಿಂಡಿಕೇಟ್ ಸಭಾ ಶಿಫಾರಸ್ಸಿನಂತೆ ಘನತೆವೆತ್ತ ಕುಲಾಧಿಪತಿಗಳು ನಾಮನಿರ್ದೇಶನ ಮಾಡಿರುವ ಪರಿಣತ ಪರಿಶೀಲನಾ ಸಮಿತಿಗೆ ಸಲ್ಲಿಸಿ, ಪರಿಣಿತ ಸಮಿತಿಯ ಶಿಫಾರಸ್ಸಿನಂತೆ ಕುಲಾಧಿಪತಿಗಳಿಗೆ ಗೌರವ ಡಾಕ್ಟರೇಟ್ ಪ್ರಧಾನ ಮಾಡಲು ಅಂತಿಮವಾಗಿ ಹೆಸರುಗಳನ್ನು ಕಳುಹಿಸಿಕೊಡಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಡಾಕ್ಟರೇಟ್ ಪ್ರಧಾನ ಮಾಡುವ ಸಂಬಂಧ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಸ್ವೀಕೃತವಾದ ಅರ್ಜಿಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2022–23:.ವಿ.ಸಿಂ: 05ಪ.ವಿ. 01 ದಿ.: 21.07.2023 |
|---|---|

ವಿಷಯ: **Mr. Samartha Raghava Nagabhushanam ಇವರಿಗೆ ತಾತ್ಕಾಲಿಕ ಡಿ.ಲಿಟ್. ಪದವಿ ಘೋಷಿಸಿ ಅಧಿಸೂಚನೆ ಹೊರಡಿಸುವ ಕುರಿತು**

*****

**Mr. Samartha Raghava Nagabhushanam** ಇವರು ತುಮಕೂರು ವಿಶ್ವವಿದ್ಯಾನಿಲಯದಿಂದ ಡಿ.ಲಿಟ್ ಪದವಿ ಪಡೆಯುವ ಸಂಬಂಧ **"Leadership Styles of Successful CEOs in building Organization: A Critical Evaluation"** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಸಲ್ಲಿಸಿದ್ದು, ಸದರಿ ಮಹಾಪ್ರಬಂಧವನ್ನು ಈ ಕೆಳಕಂಡ ಐದು ವಿಷಯ ತಜ್ಞರುಗಳಿಂದ ಮೌಲ್ಯಮಾಪನ ಮಾಡಿಸಲಾಗಿರುತ್ತದೆ.

1. **Dr. Ramsh H. N.,** Chairman, Department of Studies in Management, Kuvempu University, Shankaraghatta, Shivamogga-577451
2. **Prof. Puttanna.,** Chairman, Department of Studies in Management, Mangalore University, Mangalagangotri - 574 199
3. **Prof. Kadakol A.M.,** Department of Management Studies, Kousali Institute of Management Studies, Karnataka University, Dharwad – 580 003
4. **Prof. Rangarajan,** Chairman Department of Commerce & Management, University of Madras, Chepauk Chennai – 600005
5. **Prof. Kamaran Sultan.,** Department of Management Studies, Pandit Jawaharlal Nehru Institute of Business Management, Vikram University, Ujjain Madhya Pradesh-456006

ಮೇಲ್ಕಂಡ ಮೌಲ್ಯಮಾಪಕರುಗಳಲ್ಲಿ ಮೌಖಿಕ ಪರೀಕ್ಷೆ ನಡೆಸಲು **Dr. Ramsh H. N.,** ಇವರನ್ನು ಸಂಯೋಜಕರನ್ನಾಗಿ ಮತ್ತು **Prof. Puttanna.,** ಹಾಗೂ **Prof. Kadakol A.M.,** ಇವರುಗಳನ್ನು ಸದಸ್ಯರುಗಳನ್ನಾಗಿ ಮಾನ್ಯ ಕುಲಪತಿಯವರು ನೇಮಿಸಿದ್ದು, ದಿನಾಂಕ: **18.07.2023** ರಂದು ಮೌಖಿಕ ಪರೀಕ್ಷೆ ನಡೆಸಿ ವರದಿ ಮತ್ತು ಶಿಫಾರಸ್ಸುಗಳನ್ನು ಹಾಗೂ ವಿವಿಧ ಮೌಲ್ಯಮಾಪರುಗಳ ಕ್ರೋಢಿಕೃತ ವರದಿಯನ್ನು ಪರೀಕ್ಷಾ ವಿಭಾಗಕ್ಕೆ ಸಲ್ಲಿಸಿ ಡಿ.ಲಿಟ್ ಪದವಿಗೆ ಶಿಫಾರಸ್ಸು ಮಾಡಿರುತ್ತಾರೆ. ಹಾಗಾಗಿ **Mr. Samartha Raghava Nagabhushanam.** ಇವರಿಗೆ ತಾತ್ಕಾಲಿಕ ಡಿ.ಲಿಟ್. ಪದವಿ ಘೋಷಿಸಿ ಅಧಿಸೂಚನೆ ಹೊರಡಿಸುವ ಸಂಬಂಧ **ದಿನಾಂಕ:21.07.2023 ರಂದು ನಡೆಯುವ ಐದನೇ ವಿಶೇಷ ಸಿಂಡಿಕೇಟ್ ಸಭೆಯ** ಅನುಮೋದನೆಗಾಗಿ ಮಂಡಿಸಿದೆ.

| ವಿಷಯ ಸಂಖ್ಯೆ: | 2023: ವಿ.ಸಿಂ – 05 ಪಿಹೆಚ್.ಡಿ –01 ದಿನಾಂಕ:21.07.2023 |
|---|---|

**ವಿಷಯ**: 2015-16 ನೇ ಸಾಲಿನ ಸಂಶೋಧನಾರ್ಥಿಗಳ ಪಿಹೆಚ್.ಡಿ ಸಂಶೋಧನೆಯ ಅವಧಿ ವಿಸ್ತರಿಸುವ ಕುರಿತು.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, **2015-16** ನೇ ಸಾಲಿನ ಸಂಶೋಧನಾರ್ಥಿಗಳ ಪಿಹೆಚ್.ಡಿ ನೊಂದಣಿಯ ಹೆಚ್ಚುವರಿ ಕಾಲಾವಧಿಯನ್ನು ವಿಸ್ತರಿಸಲು ದಿನಾಂಕ:**28.06.2023**ರ ಸಿಂಡಿಕೇಟ್ ಸಭೆಯ ನಿರ್ಣಯದಂತೆ, ವಿಭಾಗದ ಡಾಕ್ಟರಲ್ ಕಮಿಟಿ ಅಧ್ಯಕ್ಷರು/ಸಂಯೋಜಕರು ಹಾಗೂ ಸಂಶೋಧನಾರ್ಥಿಗಳ ಬಗ್ಗೆ ಡಾಕ್ಟರಲ್ ಕಮಿಟಿಯ ಶಿಫಾರಸ್ಸಿನೊಂದಿಗೆ ಸಲ್ಲಿಸುವಂತೆ ತಿಳಿಸಲಾಗಿತ್ತು,

ಅದರಂತೆ, ಡಾಕ್ಟರಲ್ ಕಮಿಟಿ ಅಧ್ಯಕ್ಷರು/ಸಂಯೋಜಕರು ಸಂಶೋಧನಾರ್ಥಿಗಳು ಸಲ್ಲಿಸಿರುವ ಕಾರಣ ಮತ್ತು ಪೂರಕ ದಾಖಲೆಗಳು ಹಾಗೂ ವಿಭಾಗದ ಡಾಕ್ಟರಲ್ ಕಮಿಟಿ ಶಿಫಾರಸ್ಸಿನ ವಿವರಣೆಯನ್ನು ಅನುಬಂಧ-1 ರ ಕೋಷ್ಠಕದಲ್ಲಿ ಲಗತ್ತಿಸಿದೆ.

ಈ ಸಂಬಂಧ **2015-16** ನೇ ಸಾಲಿನ ಸಂಶೋಧನಾರ್ಥಿಗಳ ಸಂಶೋಧನಾ ಅವಧಿಯನ್ನು ವಿಸ್ತರಿಸಲು ಸಲ್ಲಿಸಿರುವ ಕಾರಣಗಳು, ದಾಖಲೆಗಳನ್ನು ಮತ್ತು ವಿಭಾಗದ ಡಾಕ್ಟರಲ್ ಕಮಿಟಿ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ: 2022-23 :ವಿ.ಸಿಂ :05 ಅಭಿವೃದ್ಧಿ ವಿ-01 ದಿನಾಂಕ:21.07.2023 |
| --- |

ವಿಷಯ: ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದಲ್ಲಿ ಕಂಪ್ಯೂಟರ್‌ಆಪರೇಟರ್‌ಆಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಪ್ರವೀಣ್ ಕುಮಾರ್.ಟಿ (ತಾತ್ಕಾಲಿಕ )ಇವರ ಸೇವೆಯನ್ನು ಮುಂದುವರೆಸಿರುವ ಕ್ರಮದ ಸ್ಥಿರೀಕರಣದ ಕುರಿತು.

* * *

ಶ್ರೀ ಪ್ರವೀಣ್ ಕುಮಾರ್ ಟಿ ಕಂಪ್ಯೂಟರ್ ಆಪರೇಟರ್ (ತಾತ್ಕಾಲಿಕ) ಇವರು ತುಮಕೂರು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ದಿನಾಂಕ:10.08.2022 ರ ವಿಶ್ವವಿದ್ಯಾನಿಲಯದ ಆದೇಶದಂತೆ ಇವರ ಸೇವೆಯನ್ನು ದಿನಾಂಕ 13.07.2022ರಿಂದ ಅನ್ವಯವಾಗುವಂತೆ 11 ತಿಂಗಳ ಅವಧಿಗೆ ಮಾಹೆಯಾನ ಕ್ರೂಢೀಕೃತ ವೇತನ ರೂ.32,000 ಗಳಲ್ಲಿ ಮುಂದುವರೆಸಿ ಆದೇಶ ನೀಡಲಾಗಿತ್ತು. ಸದರಿಯವರ ಸೇವೆಯು ದಿನಾಂಕ:12.06.2023ರಂದು ಮುಕ್ತಾಯಗೊಂಡಿರುವ ಹಿನ್ನೆಲೆಯಲ್ಲಿ ಸದರಿಯವರ ಸೇವೆಯನ್ನು ಮುಂದುವರೆಸುವಂತೆ ಕೋರಿ ವಿಶ್ವವಿದ್ಯಾನಿಲಯಕ್ಕೆ ದಿನಾಂಕ:15.06.2023ರಂದು ಮನವಿ ಸಲ್ಲಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಶ್ರೀ ಪ್ರವೀಣ್ ಕುಮಾರ್ ಟಿ, ಕಂಪ್ಯೂಟರ್ ಆಪರೇಟರ್ (ತಾತ್ಕಾಲಿಕ) ಇವರು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ವಿಶ್ವವಿದ್ಯಾನಿಯದ ಹಣಕಾಸು ಅಧಿಕಾರಿಗಳು ಸಲ್ಲಿಸಿರುವ ಕಾರ್ಯನಿರ್ವಹಣಾ ವರದಿಯ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಯವರು ಸದರಿಯವರ ಸೇವೆ ಅಗತ್ಯವಾಗಿರುವುದನ್ನು ಪರಿಗಣಿಸಿ ಸಿಂಡಿಕೇಟ್ ಸಭೆಯ ಸ್ಥಿರೀಕರಣಕ್ಕೊಳಪಟ್ಟು ದಿನಾಂಕ:13.06.2023 ರಂದು ಒಂದು ದಿನದ ಸೇವೆಯನ್ನು ಭಂಗಗೊಳಿಸಿ (Break Day) ದಿನಾಂಕ:14.06.2023ರಿಂದ ಪೂರ್ವಾನ್ವಯವಾಗುವಂತೆ ಮುಂದಿನ 11 ತಿಂಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಮಾಹೆಯಾನ ವೇತನ/ಗೌರವ ಸಂಭಾವನೆ ರೂ.32,000/-(ರೂ.ಮೂವತ್ತೆರಡು ಸಾವಿರ ಮಾತ್ರ) ಗಳನ್ನು ಪಾವತಿಸುವ ಸಂಬಂಧ ದಿನಾಂಕ:11.07.2023ರಂದು (ಆದೇಶಸಂಖ್ಯೆ:ತುವಿ:ಡಿವಿ:3500/ICT-Part-3:2023-24/1237) ಕಚೇರಿ ಆದೇಶ ಹೊರಡಿಸಲಾಗಿದ್ದು, ವಿಶ್ವವಿದ್ಯಾನಿಲಯವು ಹೊರಡಿಸಿರುವ ಈ ಆದೇಶದ ಕ್ರಮದ ಕುರಿತು ಸಿಂಡಿಕೇಟ್ ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2023-24 ವಿ.ಸಿಂ-5 / ಅ ವಿ-02 ದಿನಾಂಕ: 21.07.2023. |
|---|---|

**ವಿಷಯ: ತುಮಕೂರು ವಿಶ್ವವಿದ್ಯಾನಿಲಯವು, ತುಮಕೂರು ಸ್ಮಾರ್ಟ್‌ಸಿಟಿಯೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವ ಸ್ಥಿರೀಕರಣದ ಕುರಿತು.**

*****

ತುಮಕೂರು ಸ್ಮಾರ್ಟ್‌ಸಿಟಿ ಯೋಜನೆಯಡಿಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡಿದ್ದು, ಸದರಿ ಕಾರ್ಯಕ್ರಮಗಳ ಮೌಲ್ಯಮಾಪನಕ್ಕಾಗಿ ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ಹಾಗೂ ಸಂಶೋಧನಾ ವಿಭಾಗದಿಂದ "An Evaluvation of Social Impact of Tumakuru Smart City Projects on People in Tumakuru city" ಎಂಬ ಸಂಶೋಧನಾ ಯೋಜನೆ ಪ್ರಸ್ತಾವನೆಯನ್ನು ಸಲ್ಲಿಸಿ ದಿನಾಂಕ:27.06.2023 ರಂದು ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿದೆ.

ಈ ಹಿನ್ನೆಲೆಯಲ್ಲಿ ತುಮಕೂರು ವಿಶ್ವವಿದ್ಯಾನಿಲಯದಿಂದ ತುಮಕೂರು ಸ್ಮಾರ್ಟ್‌ಸಿಟಿ, ಲಿಮಿಟೆಡ್ ಇವರೊಂದಿಗೆ ದಿನಾಂಕ:27.06.2023 ರಂದು ಮಾಡಿಕೊಳ್ಳಲಾದ ಒಡಂಬಡಿಕೆ ಕ್ರಮವನ್ನು ಸ್ಥಿರೀಕರಣಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2022-23/ವಿ.ಸಿಂ-05:ಸಾ&ಅ-03/21.07.2023 |
|---|---|

**ವಿಷಯ: ವಿಶ್ವವಿದ್ಯಾನಿಲಯದ ಇನ್‌ಕ್ಯುಬೇಷನ್ ಸೆಂಟರ್‌ಗೆ ಸಲಹೆಗಾರರನ್ನು ನೇಮಿಸುವ ಕುರಿತು.**

* * * * *

ರಾಷ್ಟ್ರೀಯ ಶಿಕ್ಷಣ ನೀತಿಯ ಅನುಸಾರ ವಿದ್ಯಾರ್ಥಿಗಳಿಗೆ ಕೌಶಲ್ಯಾಧಾರಿತ ಶಿಕ್ಷಣ ನೀಡುವುದು ಅಗತ್ಯವಾಗಿದ್ದು, ಪದವಿಯ ಜೊತೆಗೆ ವಿದ್ಯಾರ್ಥಿಗಳಿಗೆ ಸ್ವಯಂ ಉದ್ಯೋಗ, ಕೌಶಲ್ಯ ಹಾಗೂ ಆವಿಷ್ಕಾರಕ್ಕೆ ಪೂರಕ ವಾತಾವರಣ ನಿರ್ಮಿಸುವುದು ವಿಶ್ವವಿದ್ಯಾನಿಲಯದ ಕರ್ತವ್ಯವಾಗಿರುವ ಹಿನ್ನಲೆಯಲ್ಲಿ ದಿನಾಂಕ:10.03.2023 ರಂದು ನಡೆದ ಸಿಂಡಿಕೇಟ್ ಸಭಾ ನಿರ್ಣಯದಂತೆ ವಿಶ್ವವಿದ್ಯಾನಿಲಯದಲ್ಲಿ ಇನ್‌ಕ್ಯುಬೇಷನ್ ಸೆಂಟರ್‌ನ್ನು ಸ್ಥಾಪಿಸಿ ದಿನಾಂಕ:31.03.2023 ರಂದು ಅಧಿಸೂಚನೆ ಹೊರಡಿಸಲಾಗಿದೆ.

ಮುಂದುವರೆದು, ದಿನಾಂಕ:10.03.2023 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ವಿಶ್ವವಿದ್ಯಾನಿಲಯದ ಇನ್‌ಕ್ಯುಬೇಷನ್ ಸೆಂಟರ್‌ನ್ನು ನಿರ್ವಹಿಸಲು ಇಂಡಸ್ಟ್ರಿ ಹಿನ್ನೆಲೆಯುಳ್ಳ ಒಬ್ಬರನ್ನು ನೇಮಿಸಲು ನಿರ್ಣಯಿಸಲಾಗಿದೆ.

ಈ ಸಂಬಂಧ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಕೈಗಾರಿಕೋದ್ಯಮದಲ್ಲಿ ಹೆಚ್ಚು ಅನುಭವ ಹೊಂದಿರುವ ಪ್ರೊ. ಶಾರದ ಎಚ್.ಎಸ್., ಇವರನ್ನು ಮಾಹೆಯಾನ ರೂ. 25,000/- ಗಳ ಗೌರವ ಸಂಭಾವನೆಯೊಂದಿಗೆ ವಿಶ್ವವಿದ್ಯಾನಿಲಯದ ಇನ್‌ಕ್ಯುಬೇಷನ್ ಸೆಂಟರ್‌ಗೆ ತಾತ್ಕಾಲಿಕವಾಗಿ ಸಲಹೆಗಾರರನ್ನಾಗಿ ನೇಮಿಸುವ ಸಂಬಂಧ ಸಿಂಡಿಕೇಟ್ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ : | 2022–23:ವಿ.ಸಿ–05 : ಕ್ರೀ.ವಿ– 01 ದಿನಾಂಕ: 21.07.2023 |
|---|---|

ವಿಷಯ: ದಿನಾಂಕ:04.07.2023 ರಂದು ನಡೆದ ತುಮಕೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದ 2023–24ನೇ ಸಾಲಿನ ಕ್ರೀಡಾ ಸಲಹಾ ಸಮಿತಿ ಸಭಾ ನಡಾವಳಿಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವ ಕುರಿತು.

ಉಲ್ಲೇಖ : ಸಂಖ್ಯೆ:ತುವಿ:ವಿ.ವಿ.ಪ/ಸಿಂ.ವಿ:ಸುತ್ತೋಲೆ:2023–24:1392 ದಿನಾಂಕ:18.07.2023

* * *

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದ 2023–24ನೇ ಸಾಲಿನ ಕ್ರೀಡಾ ಸಲಹಾ ಸಮಿತಿ ಸಭೆಯನ್ನು ದಿನಾಂಕ:04.07.2023 ರಂದು, ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಗಿದ್ದು, ಸದರಿ ಸಭೆಯಲ್ಲಿ ತೆಗೆದುಕೊಂಡಿರುವ ನಿರ್ಣಯಗಳನ್ನು ಅನುಷ್ಠಾನಗೊಳಿಸುವ ಸಂಬಂಧ, ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಸಿಂಡಿಕೇಟ್ ಸಭೆಯ ಚರ್ಚೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

| ವಿಷಯ ಸಂಖ್ಯೆ | 2022–23: ವಿ.ಸಿಂ–05: ಶೈವಿ : 01 ದಿನಾಂಕ: 21.07.2023 |
|---|---|

**ವಿಷಯ: ತುಮಕೂರು ವಿಶ್ವವಿದ್ಯಾನಿಲಯವು JD INSTITUTE OF FASHION TECHNOLOGY ಇವರೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆ ಕುರಿತು.**

*****

ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಬ್ಯಾಚುಲರ್ ಆಫ್ ಡಿಸೈನ್ ಪ್ರೋಗ್ರಾಮ್‌ನ್ನು ನಡೆಸುವುದರಿಂದ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಶಿಕ್ಷಣದ ಅಭಿವೃದ್ಧಿ, ತರಬೇತಿ, ತಂತ್ರಜ್ಞಾನದ ವರ್ಗಾವಣೆ ಮತ್ತು ದೀರ್ಘಾವಧಿಯ ವಾಣಿಜ್ಯೇತರ ಆಧಾರದ ಮೇಲೆ ಜ್ಞಾನವನ್ನು ಹೆಚ್ಚಿಸುವ ಸಂಬಂಧ **JD INSTITUTE OF FASHION TECHNOLOGY** ಇವರೊಂದಿಗೆ ವಿಶ್ವವಿದ್ಯಾನಿಲಯವು ಒಡಂಬಡಿಕೆಯನ್ನು ಮಾಡಿಕೊಳ್ಳುವ ಸಂಬಂಧ ಸದರಿ ವಿಷಯವನ್ನು ಸಕ್ಷಮ ಪ್ರಾಧಿಕಾರವಾದ **ಸಿಂಡಿಕೇಟ್ ಸಭೆಯ ಮುಂದೆ ಚರ್ಚೆ ಹಾಗೂ ನಿರ್ಣಯಕ್ಕಾಗಿ** ಮಂಡಿಸಿದೆ.

| ವಿಷಯ ಸಂಖ್ಯೆ | 2022-23/ವಿಸಿಂ-05/ಸಿಬ್ಬಂದಿ-01 ದಿನಾಂಕ:21.07.2023 |
|---|---|

ವಿಷಯ: ಜವಾಹರಲಾಲ್ ನೆಹರು ವಿಶ್ವವಿದ್ಯಾಲಯ ಇಲ್ಲಿ ಪ್ರಾಧ್ಯಾಪಕರ ಹುದ್ದೆಗೆ ನೇಮಕಗೊಂಡ ಡಾ. ರಮೇಶ ಎಸ್., ಸಹಾಯಕ ಪ್ರಾಧ್ಯಾಪಕರು, ಇವರನ್ನು ವಿಶ್ವವಿದ್ಯಾನಿಲಯದ ಸೇವೆಯಿಂದ ಬಿಡುಗಡೆಗೊಳಿಸಿರುವುದನ್ನು ಸ್ಥಿರೀಕರಿಸುವ ಕುರಿತು.

* * * * *

ಡಾ. ರಮೇಶ ಎಸ್, ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ವಿಶ್ವವಿದ್ಯಾನಿಲಯ ಕಲಾ ಕಾಲೇಜು ಇವರು ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಮರು ಅಧಿಸೂಚನೆ ಸಂಖ್ಯೆ: R.C/66/2022 ರಲ್ಲಿ ಆಹ್ವಾನಿಸಿದ್ದ ಅರ್ಥಶಾಸ್ತ್ರ ವಿಷಯದ ಪ್ರಾಧ್ಯಾಪಕ ಹುದ್ದೆಗೆ ದಿನಾಂಕ:02.12.2022 ರಂದು ವಿಶ್ವವಿದ್ಯಾನಿಲಯದ ಪೂರ್ವಾನುಮತಿ ಪಡೆದು ಅರ್ಜಿ ಸಲ್ಲಿಸಿರುತ್ತಾರೆ.

ಡಾ. ರಮೇಶ ಎಸ್, ಸಹಾಯಕ ಪ್ರಾಧ್ಯಾಪಕರು ಇವರು ದಿನಾಂಕ:13.07.2023 ರಂದು ವಿಶ್ವವಿದ್ಯಾನಿಲಯಕ್ಕೆ ಮನವಿ ಸಲ್ಲಿಸಿ ಅರ್ಥಶಾಸ್ತ್ರ ವಿಷಯದ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ರಾಜೀನಾಮೆ ಸಲ್ಲಿಸಿ, ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ "Centre for Economic Studies and Planning, School of Social Sciences" ಇಲ್ಲಿ ಪ್ರಾಧ್ಯಾಪಕ ಹುದ್ದೆಗೆ ಆಯ್ಕೆಗೊಂಡ ಹಿನ್ನೆಲೆಯಲ್ಲಿ ಎರಡು ವರ್ಷಗಳ ಧಾರಣಾಧಿಕಾರ (Lien) ಸೌಲಭ್ಯವನ್ನು ನೀಡಿ ವಿಶ್ವವಿದ್ಯಾನಿಲಯದ ಸೇವೆಯಿಂದ ದಿನಾಂಕ:13.07.2023ರಂದು ಬಿಡುಗಡೆಗೊಳಿಸಬೇಕೆಂದು ಕೋರಿರುತ್ತಾರೆ.

ಸದರಿಯವರ ಮನವಿ ಮೇರೆಗೆ ಹಾಗೂ ಸಿಂಡಿಕೇಟ್ ಸಭೆಯ ಸ್ಥಿರೀಕರಣಕೊಳ್ಳಪಟ್ಟು ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಡಾ. ರಮೇಶ ಎಸ್., ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು ಇವರನ್ನು ಒಂದು ವರ್ಷದ ಅವಧಿಗೆ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಧಾರಣಾಧಿಕಾರ (Lien) ಸೌಲಭ್ಯ ನೀಡಿ ವಿಶ್ವವಿದ್ಯಾನಿಲಯದ ಕಲಾ ಕಾಲೇಜಿನ ಅರ್ಥಶಾಸ್ತ್ರ ವಿಭಾಗ ಸಹಾಯಕ ಪ್ರಾಧ್ಯಾಪಕರ ಹುದ್ದೆಯ ಕರ್ತವ್ಯದಿಂದ ದಿನಾಂಕ:13.07.2023 ಅಪರಾಹ್ನ ಬಿಡುಗಡೆಗೊಳಿಸಲಾಗಿರುತ್ತದೆ.

ಈ ಸಂಬಂಧ ದಿನಾಂಕ:13.07.2023ರಂದು ವಿಶ್ವವಿದ್ಯಾನಿಲಯದಿಂದ ಹೊರಡಿಸಿರುವ ಬಿಡುಗಡೆ ಆದೇಶದ ಕ್ರಮವನ್ನು ಸಿಂಡಿಕೇಟ್ ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು- 572 103

## 2022-23ನೇ ಸಾಲಿನ ಐದನೇ ವಿಶೇಷ ಸಿಂಡಿಕೇಟ್ ಸಭೆಯ ಹೆಚ್ಚುವರಿ ಕಾರ್ಯಸೂಚಿಗಳು

| ಕ್ರ ಸಂ | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ಪುಟ ಸಂಖ್ಯೆ |
|---|---|---|---|
| | | **ಹೆಚ್ಚುವರಿ ಕಾರ್ಯಸೂಚಿಗಳು** | |
| | | **ಸಿಬ್ಬಂದಿ ವಿಭಾಗ** | |
| 10. | 2022-23.ವಿ.ಸಿಂ-05 ಸಿಬ್ಬಂದಿ ವಿಭಾಗ-02 | ಅಧ್ಯಕ್ಷರು, ಡಾ. ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ ಇವರು ತಮ್ಮ ವಿಭಾಗದಲ್ಲಿ ಕಾರ್ಯಭಾರದ ವಿವರಗಳನ್ನು ಸಲ್ಲಿಸುವಲ್ಲಿ ವಿಶ್ವವಿದ್ಯಾನಿಲಯಕ್ಕೆ ದ್ವಂದ್ವ ಮಾಹಿತಿಗಳನ್ನು ಸಲ್ಲಿಸಿರುವ ಕುರಿತು. | 10 |
| | | **ಇಂಜಿನಿಯರಿಂಗ್ ವಿಭಾಗ** | |
| 11. | 2022-23.ವಿ.ಸಿಂ-05 ಇಂ. ವಿಭಾಗ-01 | ತುಮಕೂರು ನಗರದ ರೈಲ್ವೆ ನಿಲ್ದಾಣ ರಸ್ತೆಯಲ್ಲಿರುವ ವಿಶ್ವವಿದ್ಯಾನಿಲಯದ ಸ್ನಾತಕ ಮಹಿಳೆಯರ ವಿದ್ಯಾರ್ಥಿನಿಲಯ ಕಟ್ಟಡದ ದುರಸ್ಥಿ ಕುರಿತು. | 11 |
| 12. | 2022-23.ವಿ.ಸಿಂ-05 ಇಂ. ವಿಭಾಗ-02 | ತುಮಕೂರು ವಿಶ್ವವಿದ್ಯಾನಿಲಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸೇವೆಯನ್ನು ನೀಡುತ್ತಿರುವ ಮೆ. ಸಿ.ಐ.ಎಸ್. ಬ್ಯೂರೋಸ್ ಫೆಸಿಲಿಟಿ ಪ್ರೈ.ಲಿ., ಬೆಂಗಳೂರು ರವರ ಸೇವೆಯ ಕುರಿತು. | 12 |
| | | **ಸಾಮಾನ್ಯ ಮತ್ತು ಖರೀದಿ ವಿಭಾಗ** | |
| 13. | 2022-23.ವಿ.ಸಿಂ-05 ಅಭಿವೃದ್ಧಿ ವಿಭಾಗ-04 | ಕುಮಾರವ್ಯಾಸ ಭಾರತ ಎಂಬ ಕರ್ಣಾಟಕ ಭಾರತ ಕಥಾ ಮಂಜರಿ ಕೃತಿಯ ಎರಡು ಸಂಪುಟಗಳ ವಿಲೇವಾರಿ ಕುರಿತು. | 13 |

| ವಿಷಯ ಸಂಖ್ಯೆ | 2022-23/ವಿ.ಸಿಂ-05:ಸಿಬ್ಬಂದಿ-02 ದಿನಾಂಕ:21.07.2023 |
|---|---|

ವಿಷಯ: ಅಧ್ಯಕ್ಷರು, ಡಾ. ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ ಇವರು ತಮ್ಮ ವಿಭಾಗದ ಕಾರ್ಯಭಾರದ ವಿವರಗಳನ್ನು ಸಲ್ಲಿಸುವಲ್ಲಿ ವಿಶ್ವವಿದ್ಯಾನಿಲಯಕ್ಕೆ ದ್ವಂದ್ವ ಮಾಹಿತಿಗಳನ್ನು ಸಲ್ಲಿಸಿರುವ ಕುರಿತು.

* * * * *

ಡಾ. ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರದ ವಿಭಾಗಿಯ ಪರಿಷತ್ತಿನ ಸಭಾ ನಡಾವಳಿಯನ್ನು ಅಧ್ಯಕ್ಷರು ದಿನಾಂಕ 18.04.2023 ರ ಪತ್ರ ಸಲ್ಲಿಸಿ, ಸದರಿ ನಡಾವಳಿಯಲ್ಲಿ ಪ್ರೊ.ಡಿ.ವಿ. ಪರಮಶಿವಮೂರ್ತಿಯವರು ಕನ್ನಡ ವಿಶ್ವವಿದ್ಯಾನಿಲಯ ಹಂಪಿಗೆ ಕುಲಪತಿಗಳಾಗಿ ತೆರಳಿದ ಹಿನ್ನೆಲೆಯಲ್ಲಿ ಅವರ ತರಗತಿಗಳ ಕಾರ್ಯಭಾರಗಳನ್ನು ಮತ್ತು ಸುದೀರ್ಘ ಕಾಲದಿಂದ ಅನಾರೋಗ್ಯದಿಂದ ಇರುವ ಡಾ. ಶ್ರೀಪಾದ ತಮ್ಮಯ್ಯ ಭಟ್‌ರವರ ತರಗತಿ ಕಾರ್ಯಭಾರಗಳನ್ನು ನಿರ್ವಹಿಸುವುದಕ್ಕೆ 16 ಗಂಟೆಗಳ ಪೂರ್ಣ ಕಾರ್ಯಭಾರವನ್ನು ನಿರ್ವಹಿಸಲು ಅತಿಥಿ ಉಪನ್ಯಾಸಕರು ಬೇಕಾಗಿದ್ದಾರೆ ಎಂದು ವಿಶ್ವವಿದ್ಯಾನಿಲಯಕ್ಕೆ ಮನವಿ ಸಲ್ಲಿಸಿರುತ್ತಾರೆ.

ತದನಂತರ, ದಿನಾಂಕ 18.04.2023 ರ ವಿಭಾಗದ ನಡಾವಳಿಯ ಪೂರಕವಾಗಿ ದಿನಾಂಕ 30.05.2023 ರಪತ್ರದಲ್ಲಿ ಸದರಿಯವರ ವಿಭಾಗದಲ್ಲಿನ ಈ ಕೆಳಗಿನಂತೆ ಒಟ್ಟು 76 ಗಂಟೆಗಳಷ್ಟು ಕಾರ್ಯಭಾರವನ್ನು ಹಂಚಿಕೆ ಮಾಡಿರುವ ಬಗ್ಗೆ ಮಾಹಿತಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತಾರೆ.

| ಕ್ರಸಂ | ಅಧ್ಯಾಪಕರ ಹೆಸರು | ಕಾರ್ಯಭಾರದ ವಿವರ |
|---|---|---|
| 01 | ಪ್ರೊ. ನಿತ್ಯಾನಂದ ಬಿ ಶೆಟ್ಟಿ, ಪ್ರಾಧ್ಯಾಪಕರು | 14 ಗಂಟೆ |
| 02 | ಪ್ರೊ. ಅಣ್ಣಮ್ಮ, ಪ್ರಾಧ್ಯಾಪಕರು | 14 ಗಂಟೆ |
| 03 | ಡಾ. ಪಿ.ಎಂ. ಗಂಗಾಧರಯ್ಯ, ಸಹಾಯಕ ಪ್ರಾಧ್ಯಾಪಕರು | 16 ಗಂಟೆ |
| 04 | ಡಾ. ನಾಗಭೂಷಣ, ಸಹಾಯಕ ಪ್ರಾಧ್ಯಾಪಕರು | 16 ಗಂಟೆ |
| 05 | ಡಾ. ಶ್ರೀಪಾದ ಭಟ್, ಸಹಾಯಕ ಪ್ರಾಧ್ಯಾಪಕರು<br>(ಇವರ ಬದಲಿಗೆ ಓರ್ವಅಧ್ಯಾಪಕರನ್ನು ಒದಗಿಸುವಂತೆ) | 16 ಗಂಟೆ |
| | ಒಟ್ಟು | 76 ಗಂಟೆಗಳು |

ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗಗಳ ಬೋಧಕ ಸಿಬ್ಬಂದಿಗಳಿಗೆ ಹಂಚಿಕೆ ಮಾಡಲಾಗಿರುವ ಕಾರ್ಯಭಾರವನ್ನು ಪರಿಶೀಲಿಸುವ ಸಂಬಂಧ ಪ್ರೊ. ಪರಮಶಿವಯ್ಯ ಪಿ., ಪ್ರಾಧ್ಯಾಪಕರು ಇವರ ನೇತೃತ್ವದಲ್ಲಿ ದಿನಾಂಕ 16.06.2023 ರಂದು ಕಾರ್ಯಭಾರ ಮೇಲ್ವಿಚಾರಣಾ ಸಮಿತಿಯನ್ನು ರಚಿಸಿ ಅಧಿಸೂಚಿಸಲಾಗಿತ್ತು. ಸದರಿ ಸಮಿತಿಯು ದಿನಾಂಕ 19.06.2023 ರಂದು ಸುತ್ತೋಲೆಯನ್ನು ಹೊರಡಿಸಿ, ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗಗಳ ಬೋಧಕ ಸಿಬ್ಬಂದಿಗಳಿಗೆ ಹಂಚಿಕೆ ಮಾಡಲಾಗಿರುವ ಕಾರ್ಯಭಾರದ ವಿವರಗಳನ್ನು ಪಡೆದು ಪರಿಶೀಲಿಸಿ, ದಿನಾಂಕ 01.07.2023 ರಂದು ವಿಶ್ವವಿದ್ಯಾನಿಲಯಕ್ಕೆ ನಡಾವಳಿಯನ್ನು ಸಲ್ಲಿಸಿರುತ್ತಾರೆ.

ಸದರಿ ನಡಾವಳಿಯಲ್ಲಿ ಈ ಕೆಳಕಂಡಂತೆ ಶಿಫಾರಸ್ಸು ಮಾಡಿರುತ್ತಾರೆ.

"ಎಲ್ಲಾ ವಿಭಾಗಗಳಲ್ಲಿ ಪ್ರಾಧ್ಯಾಪಕರು / ಸಹಪ್ರಾಧ್ಯಾಪಕರಿಗೆ 14 ಗಂಟೆ, ಸಹಾಯಕ ಪ್ರಾಧ್ಯಾಪಕರಿಗೆ 16 ಗಂಟೆಗಳ ಕಾರ್ಯಭಾರ ಹಂಚಿಕೆಯಾಗಿದ್ದು, ಡಾ. ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರದಲ್ಲಿನ ಪ್ರಾಧ್ಯಾಪಕರಿಗೆ 12 ಗಂಟೆ ಹಾಗೂ ಸಹಾಯಕ ಪ್ರಾಧ್ಯಾಪಕರಿಗೆ 14 ಗಂಟೆ (ಡಾ. ಶ್ರೀಪಾದ ಭಟ್ ರವರಿಗೆ ಕೇವಲ 04 ಗಂಟೆಗಳ ಕಾರ್ಯಭಾರವನ್ನು ಹಂಚಿಕೆ ಮಾಡಲಾಗಿರುತ್ತದೆ.)ಕಾರ್ಯಭಾರವನ್ನು ಹಂಚಿಕೆ ಮಾಡಿರುತ್ತಾರೆ. ಈ ವಿಭಾಗದ ಒಟ್ಟು ಕಾರ್ಯಭಾರ 56 ಗಂಟೆಗಳನ್ನು ಮಾಡಲಾಗಿದ್ದು ಡಾ. ಶ್ರೀಪಾದ್ ಭಟ್ ರವರಿಗೆ ಕಾರ್ಯಭಾರವನ್ನು ನಿಯಮಾನುಸಾರ ಹಂಚಿಕೆ ಮಾಡಿರುವುದಿಲ್ಲ".

ಮುಂದುವರದು, ಸದರಿ ಸಮಿತಿಗೆ ಅಧ್ಯಕ್ಷರು, ಡಾ. ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ ಇವರು ದಿನಾಂಕ 21.06.2023 ರಂದು ಸಲ್ಲಿಸಿರುವ ಕನ್ನಡ ಅಧ್ಯಯನ ಕೇಂದ್ರದ ಕಾರ್ಯಭಾರದ ಹಂಚಿಕೆ ಮಾಡಿರುವ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರ.ಸಂ | ಅಧ್ಯಾಪಕರ ಹೆಸರು | ಕಾರ್ಯಭಾರದ ವಿವರ |
|---|---|---|
| 01 | ಪ್ರೊ. ಅಣ್ಣಮ್ಮ, ಪ್ರಾಧ್ಯಾಪಕರು | 12 ಗಂಟೆ |
| 02 | ಪ್ರೊ. ನಿತ್ಯಾನಂದ ಬಿ ಶೆಟ್ಟಿ, ಪ್ರಾಧ್ಯಾಪಕರು | 12 ಗಂಟೆ |
| 03 | ಡಾ. ಪಿ.ಎಂ. ಗಂಗಾಧರಯ್ಯ, ಸಹಾಯಕ ಪ್ರಾಧ್ಯಾಪಕರು | 14 ಗಂಟೆ |
| 04 | ಡಾ. ನಾಗಭೂಷಣ, ಸಹಾಯಕ ಪ್ರಾಧ್ಯಾಪಕರು | 14 ಗಂಟೆ |
| 05 | ಡಾ. ಶ್ರೀಪಾದ ಭಟ್, ಸಹಾಯಕ ಪ್ರಾಧ್ಯಾಪಕರು | 04 ಗಂಟೆ |
| | ಒಟ್ಟು | 56 ಗಂಟೆಗಳು |

ಈ ಮೇಲ್ಕಂಡ ವಿವರಗಳನ್ವಯ ಅಧ್ಯಕ್ಷರು, ಡಾ. ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ ಇವರು ಕನ್ನಡ ಅಧ್ಯಯನ ವಿಭಾಗದ ಕಾರ್ಯಭಾರದ ವಿವರಗಳನ್ನು ಸಲ್ಲಿಸುವಲ್ಲಿ ವಿಶ್ವವಿದ್ಯಾನಿಲಯಕ್ಕೆ ದ್ವಂದ್ವ ಮಾಹಿತಿಗಳನ್ನು ಸಲ್ಲಿಸಿರುವುದು ಕಂಡು ಬಂದಿರುತ್ತದೆ ಮತ್ತು ಪ್ರಸ್ತುತ ಇರುವ ಸಿಬ್ಬಂದಿಗಳಿಗೆ ಪೂರ್ಣಪ್ರಮಾಣದ ಕಾರ್ಯಭಾರ ಇಲ್ಲದೇ ಅತಿಥಿ ಉಪನ್ಯಾಸಕರನ್ನು ಕೋರಿರುವುದು, ವಿಭಾಗದ ಪ್ರಾಧ್ಯಾಪಕರಿಗೆ ಮತ್ತು ಸಹಾಯಕ ಪ್ರಾಧ್ಯಾಪಕರುಗಳಿಗೆ ಯು.ಜಿ.ಸಿ. ನಿಯಮಾನುಸಾರ ಕಾರ್ಯಾಭಾರವನ್ನು ಹಂಚಿಕೆ ಮಾಡದೇ ಯು.ಜಿ.ಸಿ. ನಿಯಮಗಳನ್ನು ಉಲ್ಲಂಘಿಸಿರುತ್ತಾರೆ.

ವಿಶ್ವವಿದ್ಯಾನಿಲಯವು ಪ್ರೊ.ಡಿ.ವಿ. ಪರಮಶಿವಮೂರ್ತಿಯವರು ಕನ್ನಡ ವಿಶ್ವವಿದ್ಯಾನಿಲಯ ಹಂಪಿಗೆ ಕುಲಪತಿಗಳಾಗಿ ತೆರಳಿದ ಹಿನ್ನೆಲೆಯಲ್ಲಿ ಅವರ ತರಗತಿಗಳ ಕಾರ್ಯಭಾರಗಳನ್ನು ಮತ್ತು ಅಧ್ಯಕ್ಷರ ಮನವಿ ಮೇರೆಗೆ, 76 ಗಂಟೆಗಳ ಕಾರ್ಯಾಭಾರದ ಮನವಿ ಮೇರೆಗೆ, ನಿಯೋಜಿಸಿರುವ ಸಹಾಯಕ ಪ್ರಾಧ್ಯಾಪಕರಿಗೆ ಕಾರ್ಯಾಭಾರ ಹಂಚಿಕೆ ಮಾಡದೇ ವಿಭಾಗದ ಅಧ್ಯಕ್ಷರು, ದಿನಾಂಕ 15.06.2023 ರ ಪತ್ರದಲ್ಲಿ ದಿನಾಂಕ 06.06.2023 ರಂದು ಸದರಿ ವಿಭಾಗಕ್ಕೆ ನಿಯೋಜಿಸಿರುವ ಸಹಾಯಕ ಪ್ರಾಧ್ಯಾಪಕರಾದ ಡಾ. ಗೀತಾವಸಂತ ರವರನ್ನು ಪೂರ್ಣಾವಧಿಗೆ ನಿಯೋಜಿಸಲಾಗಿದ್ದು ಇವರಿಗೆ ಕಾರ್ಯಾಭಾರವು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಮೇಲ್ಕಂಡ ವಿವರಗಳಿಗೆ ಸಂಬಂಧಿಸಿದಂತೆ, ಪ್ರೊ.ಡಿ.ವಿ. ಪರಮಶಿವಮೂರ್ತಿಯವರು ಇರುವ ಅವಧಿಯಲ್ಲಿ ನಿರ್ವಹಿಸಿರುವ ಕಾರ್ಯಾಭಾರದ ವಿವರಗಳೊಂದಿಗೆ ಹಿಂದಿನ ಮೂರು ವರ್ಷಗಳ ಅಧಿಕೃತ ಬೋಧನಾ ಕಾರ್ಯದ ವೇಳಾ ಪಟ್ಟಿಯ ಪ್ರತಿಗಳನ್ನು ಮತ್ತು ವಿಷಯವಾರು ತರಗತಿಗಳ ಕಾರ್ಯಭಾರದ ವಿವರಗಳ ಪೂರಕ ದಾಖಲೆಗಳೊಂದಿಗೆ ಮತ್ತು ಪ್ರಸ್ತುತ ಅಧ್ಯಕ್ಷರು ಸಲ್ಲಿಸಿರುವ ದಿನಾಂಕ 18.04.2023 ಮತ್ತು 30.05.2023 ರ ಪತ್ರಗಳಲ್ಲಿ ನೀಡಿರುವ ಕಾರ್ಯಾಭಾರದ ವಿವರಗಳಲ್ಲಿರುವ ವ್ಯತ್ಯಾಸಗಳ ಕುರಿತು ಲಿಖಿತ ಸಮಜಾಯಿಷಿಯನ್ನು 07 ದಿನದೊಳಗಾಗಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವಂತೆ ದಿನಾಂಕ 14.07.2023 ಕಾರಣ ಕೇಳುವ ನೋಟೀಸ್ ಜಾರಿಗೊಳಿಸಲಾಗಿದೆ. ಸದರಿಯವರು ದಿನಾಂಕ 17.07.2023 ರಂದು ನೋಟೀಸ್‌ನ್ನು ವಿಭಾಗದಲ್ಲಿ ಸ್ವೀಕರಿಸಿದ್ದು ಪ್ರಸ್ತುತ ದಿನಾಂಕದವರೆವಿಗೂ ಅಧ್ಯಕ್ಷರಿಂದ ಸಮಜಾಯಿಷಿಯು ವಿಶ್ವವಿದ್ಯಾನಿಲಯಕ್ಕೆ ಸ್ವೀಕೃತಗೊಂಡಿರುವುದಿಲ್ಲ.

ಈ ವಿವರಗಳನ್ನು ಸಿಂಡಿಕೇಟ್ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ: | 2022–23: ವಿ.ಸಿಂ.5 :ಇಂವಿ:01 ದಿನಾಂಕ: 21.07.2023 |
|---|---|

**ವಿಷಯ:** **ತುಮಕೂರು ನಗರದ ರೈಲ್ವೆ ನಿಲ್ದಾಣ ರಸ್ತೆಯಲ್ಲಿರುವ ವಿಶ್ವವಿದ್ಯಾನಿಲಯದ ಸ್ನಾತಕ ಮಹಿಳೆಯರ ವಿದ್ಯಾರ್ಥಿನಿಲಯ ಕಟ್ಟಡದ ದುರಸ್ತಿ ಕುರಿತು.**

*****

ತುಮಕೂರು ನಗರದ ರೈಲ್ವೆ ನಿಲ್ದಾಣ ರಸ್ತೆಯಲ್ಲಿರುವ ವಿಶ್ವವಿದ್ಯಾನಿಲಯದ ಸ್ನಾತಕ ಮಹಿಳೆಯರ ವಿದ್ಯಾರ್ಥಿನಿಲಯ ಕಟ್ಟಡವನ್ನು ದುರಸ್ತಿಪಡಿಸಲು ತಾಂತ್ರಿಕವಾಗಿ ಪರಿಶೀಲಿಸಿ ವರದಿ ಪಡೆಯುವ ಕೆಲಸವನ್ನು ದರಪಟ್ಟಿ ಆಹ್ವಾನಿಸಿ ಮೆ. ಶ್ರೀ ಟೆಕ್ ಸಪೋರ್ಟ್ಸ್, ತುಮಕೂರು ರವರಿಗೆ ದಿನಾಂಕ:17.10.2022 ರಂದು ಕಾರ್ಯಾದೇಶದ ಮೂಲಕ ವಹಿಸಲಾಗಿತ್ತು. ಸದರಿ ಸಂಸ್ಥೆಯವರು ಸದರಿ ಕಟ್ಟಡವನ್ನು ತಜ್ಞರ ಜೊತೆಗೂಡಿ ಕೂಲಂಕಷವಾಗಿ ಪರಿಶೀಲಿಸಿ ಮಾದರಿಗಳನ್ನು ಸಂಗ್ರಹಿಸಿಕೊಂಡು ಅವುಗಳನ್ನು ಸಿವಿಲ್ ಇಂಜಿನಿಯರಿಂಗ್ ವಿಭಾಗ, ಯು.ವಿ.ಸಿ.ಇ., ಬೆಂಗಳೂರು ವಿಶ್ವವಿದ್ಯಾನಿಲಯ ಇಲ್ಲಿ ಪರೀಕ್ಷೆಗೆ ಒಳಪಡಿಸಿ ಫಲಿತಾಂಶದ ವರದಿಗಳನ್ನು ಪಡೆದುಕೊಂಡು ಇನ್ನಿತರೆ ಸುರಕ್ಷಾ ಮಾನದಂಡಗಳನ್ವಯ ಕಟ್ಟಡವನ್ನು ಎಲ್ಲಾ ಆಯಾಮಗಳಲ್ಲಿ ಪರಿಶೀಲಿಸಿ ದೃಢೀಕರಿಸಿಕೊಂಡು ಒಟ್ಟು 27 ಪುಟಗಳುಳ್ಳ ವಿಸ್ತೃತ ವರದಿಯನ್ನು ಸಲ್ಲಿಸಿದ್ದು, ವರದಿಯ ಅಂತಿಮ ಸಾರಾಂಶದ ಉದ್ಧೃತ ಭಾಗವನ್ನು ಈ ಕೆಳಕಂಡಂತೆ ವಿವರಿಸಿದೆ.

**"Thus the building does not comply with the safety and serviceability requirments and hence the next phase of evaluation is also not necessary. Hence it is advised to demolish building and building is not advisable for any tenancy or occupancy"**

**<u>The Buidling is unsafe for accupancy based on following obervations</u>**

1. **Excessive Dampness is observed at exterior walls**
2. **Excessive Dampness is observed in slabs of wash room area**
3. **Seepage of water is also observed in washroom area**
4. **Structural cracks more than limits at some locations of walls is observed**
5. **Visible hairline cracks at some locations of wall and slab**
6. **Sign of settlement of foundation and SSM wall at front portion was observed at the time of inspection**
7. **Structural failure and spalling of members of structure.**
8. **Reinforcement in slab is completely corroded at many portions of structure.**

ಸದರಿ ತಾಂತ್ರಿಕ ವರದಿಯನ್ನು ದೃಢೀಕರಿಸಲು ಕೋರಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ತುಮಕೂರು ಉಪ ವಿಭಾಗ ತುಮಕೂರು ರವರಿಗೆ ದಿನಾಂಕ:28.02.2023 ರಂದು ಪತ್ರವನ್ನು ಬರೆಯಲಾಗಿತ್ತು.

ಸದರಿ ವರದಿಯನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರ ಶಿಫಾರಸ್ಸಿನಂತೆ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ತುಮಕೂರು ರವರು ದಿನಾಂಕ:30.06.2023 ಪತ್ರವನ್ನು ಬರೆದು, <u>ಕಟ್ಟಡದ ಛಾವಣಿಯಲ್ಲಿ ನೀರು ಸೋರಿ ಬಿರುಕುಗಳು ಮೂಡಿ ಛಾವಣಿಯು ಶಿಥಿಲಾವಸ್ಥೆಯಲ್ಲಿರುತ್ತದೆ ಹಾಗೂ ಗೋಡೆಗಳಲ್ಲಿ ನೀರು ಇಳಿದು ಗೋಡೆಗಳಲ್ಲಿ ಬಿರುಕುಗಳು ಮೂಡಿರುತ್ತವೆ, ಆದ್ದರಿಂದ ತುಮಕೂರು ನಗರದ ರೈಲ್ವೆ ನಿಲ್ದಾಣ ರಸ್ತೆಯಲ್ಲಿರುವ ವಿಶ್ವವಿದ್ಯಾನಿಲಯದ ಸ್ನಾತಕ ಮಹಿಳೆಯರ ವಿದ್ಯಾರ್ಥಿನಿಲಯವನ್ನು ನಿಯಮಾನುಸಾರ ನೆಲಸಮ ಮಾಡಿ ಅನುಪಯುಕ್ತ ಸಾಮಗ್ರಿಗಳನ್ನು ವಿಲೇವಾರಿ ಮಾಡಲು ತಿಳಿಸಲಾಗಿದೆ.</u> ಎಂದು ದೃಢೀಕರಣವನ್ನು ನೀಡಿರುತ್ತಾರೆ.

ಕಾರ್ಯಪಾಲಕ ಇಂಜಿನಿಯರ್., ಲೋಕೋಪಯೋಗಿ ಇಲಾಖೆ, ತುಮಕೂರು ರವರ ಅಭಿಪ್ರಾಯದಂತೆ ಸದರಿ ಹಾಸ್ಟೆಲ್ ಶಿಥಿಲಾವಸ್ಥೆಯಲ್ಲಿರುವುದರಿಂದ ವಿದ್ಯಾರ್ಥಿನಿಯರ ಸುರಕ್ಷತೆ ಮತ್ತು ಭದ್ರತೆಯ ಹಿತದೃಷ್ಟಿಯಿಂದ ಕಟ್ಟಡವನ್ನು ನೆಲಸಮ ಮಾಡುವ ಬಗ್ಗೆ ಮತ್ತು ಸದರಿ ಹಾಸ್ಟೆಲ್‌ನಲ್ಲಿ ವಾಸ್ತವ್ಯವಿರುವ ವಿದ್ಯಾರ್ಥಿನಿಯರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುವ ಬಗ್ಗೆ ವಿಷಯವನ್ನು ಸಿಂಡಿಕೇಟ್ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ: | 2022–23: ವಿ.ಸಿಂ.5 :ಇಂವಿ:02 ದಿನಾಂಕ: 21.07.2023 |
|---|---|

ವಿಷಯ: ತುಮಕೂರು ವಿಶ್ವವಿದ್ಯಾನಿಲಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸೇವೆಯನ್ನು ನೀಡುತ್ತಿರುವ ಮೆ. ಸಿ.ಐ.ಎಸ್ ಬ್ಯೂರೋಸ್ ಫೆಸಿಲಿಟಿ ಪ್ರೈ.ಲಿ, ಬೆಂಗಳೂರು ರವರ ಸೇವೆಯ ಕುರಿತು.

*****

ತುಮಕೂರು ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:01.02.2023 ರಿಂದ ಭದ್ರತಾ ಸೇವೆಯನ್ನು ಮೆ. ಸಿ.ಐ.ಎಸ್ ಬ್ಯೂರೋಸ್ ಫೆಸಿಲಿಟಿ ಪ್ರೈ.ಲಿ, ಬೆಂಗಳೂರು ರವರು ಒದಗಿಸುತ್ತಿದ್ದು, ದಿನಾಂಕ:21.04.2023 ರಂದು ಕೆಲ ಸೆಕ್ಯೂರಿಟಿ ಗಾರ್ಡ್‌ಗಳು ದೂರನ್ನು ಸಲ್ಲಿಸಿ ಸಂಸ್ಥೆಯವರು, ಈ ಹಿಂದಿನ ಸೆಕ್ಯೂರಿಟಿ ಗಾರ್ಡ್‌ಗಳಿಗೆ ಪೂರ್ಣ ವೇತನವನ್ನು, ಹೊಸದಾಗಿ ಕೆಲಸಕ್ಕೆ ಸೇರಿದ ಗಾರ್ಡ್‌ಗಳಿಗೆ ಕಡಿಮೆ ವೇತನವನ್ನು ಪಾವತಿಸುತ್ತಿರುವ ಬಗ್ಗೆ, ವೇತನವನ್ನು ಸಿಬ್ಬಂದಿಗಳ ಬ್ಯಾಂಕ್ ಖಾತೆಗೆ ಜಮೆ ಮಾಡದೆ ನಗದಾಗಿ ಪಾವತಿಸುತ್ತಿರುವ ಮತ್ತು ಸಮವಸ್ತ್ರಕ್ಕಾಗಿ ರೂ. 3000/– ಗಳನ್ನು ಕಟಾಯಿಸುತ್ತಿರುವ ಬಗ್ಗೆ ಹಾಗೂ ಅದನ್ನು ಪ್ರಶ್ನಿಸಿದರೆ ಕೆಲಸದಿಂದ ತೆಗೆಯುವ ಬಗ್ಗೆ ಹೆದರಿಸುತ್ತಿದ್ದು ಈ ಬಗ್ಗೆ ನ್ಯಾಯ ಕೊಡಿಸಬೇಕೆಂದು ಬಾದಿತ ಗಾರ್ಡ್‌ಗಳು ಕೋರಿರುತ್ತಾರೆ.

ಈ ಬಗ್ಗೆ ಸದರಿ ಏಜೆನ್ಸಿಗೆ ದಿನಾಂಕ:08.05.2023 ರಂದು ನೋಟೀಸ್ ನೀಡಿ ಪ್ರತಿ ನೌಕರರಿಗೂ ಸರ್ಕಾರದ ಕಾರ್ಮಿಕ ಇಲಾಖೆಯು ನಿಗದಿಪಡಿಸಿರುವ ವೇತನವನ್ನು ಕಾರಣರಹಿತವಾಗಿ ಕಟಾಯಿಸದೇ ಪೂರ್ಣ ವೇತನವನ್ನು ನೀಡುವುದು ಹಾಗೂ ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ, ಇನ್ನಿತರೆ ಇಲಾಖೆಯ ಎಲ್ಲಾ ಸೌಲಭ್ಯಗಳನ್ನು ತಪ್ಪದೇ ಮಂಜೂರು ಮಾಡುವುದು ತಮ್ಮ ಆದ್ಯ ಕರ್ತವ್ಯವಾಗಿರುತ್ತದೆ. ಯಾವುದೇ ಕಾರ್ಮಿಕರ ಹಕ್ಕು ಸೌಲಭ್ಯಗಳನ್ನು ವಂಚಿಸದೆ ಅವರಿಗೆ ವಿಸ್ತರಿಸಬೇಕಾದ ಎಲ್ಲಾ ಸೌಲಭ್ಯಗಳನ್ನು ಮಂಜೂರು ಮಾಡದೇ ಇದ್ದಲ್ಲಿ ಕಾರ್ಮಿಕ ಇಲಾಖೆಯ ನಿಯಮಗಳನ್ನು ಉಲ್ಲಂಘಿಸಿದಂತಾಗುತ್ತದೆ. ಈ ತರಹದ ವರ್ತನೆಗೆ ದಂಡವನ್ನು ವಿಧಿಸುವ ಹಕ್ಕು ಇಲಾಖೆಗೆ ಇರುತ್ತದೆ. ಆದ್ದರಿಂದ, ಸದರಿ ಘಟನೆಯ ಬಗ್ಗೆ ಈ ನೋಟೀಸ್ ತಲುಪಿದ ಮೂರು ದಿನಗಳ ಒಳಗಾಗಿ ಆರೋಪಿಸಿರುವ ವಿಷಯಗಳಿಗೆ ತಮ್ಮ ಸ್ಪಷ್ಟ ಹಾಗೂ ಸೂಕ್ತ ಸಮಜಾಯಿಷಿಯನ್ನು ತುರ್ತಾಗಿ ಸಲ್ಲಿಸುವಂತೆ ಈ ಮೂಲಕ ಸೂಚಿಸಿದೆ. ತಪ್ಪಿದಲ್ಲಿ ತಾವು ಹೇಳುವುದು ಏನೂ ಇಲ್ಲವೆಂದು ಭಾವಿಸಿ ಪ್ರಕರಣವನ್ನು ಕಾರ್ಮಿಕ ಇಲಾಖೆಗೆ ವರ್ಗಾಹಿಸಿ ತಮ್ಮ ಸೇವೆಯನ್ನು ರದ್ದುಗೊಳಿಸಲಾಗುವುದೆಂದು ತಿಳಿಸಲಾಗಿರುತ್ತದೆ.

ಸದರಿ ಏಜೆನ್ಸಿಯಿಂದ ಈ ಬಗ್ಗೆ ಯಾವುದೇ ಸಮಜಾಯಿಷಿಯು ಸ್ವೀಕೃತಗೊಳ್ಳದ ಕಾರಣ ದಿನಾಂಕ:26.05.2023 ರಂದು ಮತ್ತೊಂದು ನೋಟೀಸ್ ನೀಡಿ ದಿನಾಂಕ:08.05.2023 ರಂದು ಸಲ್ಲಿಸಿರುವ ನೋಟೀಸ್‌ಗೆ 03 ದಿನಗಳ ಒಳಗಾಗಿ ಸಲ್ಲಿಸದ ಕಾರಣ ಪ್ರಕರಣವನ್ನು ವಿಶ್ವವಿದ್ಯಾನಿಲಯವು ಗಂಭೀರವಾಗಿ ಪರಿಗಣಿಸಿ ವಿಶ್ವವಿದ್ಯಾನಿಲಯದ ನೋಟೀಸ್‌ಗೆ ಸಮಜಾಯಿಷಿಯನ್ನು ಸಲ್ಲಿಸದಿರುವುದು ತಮ್ಮ ಉದ್ಧಟತನವಾಗಿದ್ದು, ಈ ನೋಟೀಸ್ ತಲುಪಿದ ಮರು ಟಪಾಲಿನಲ್ಲಿ ತಮ್ಮ ಸಮಜಾಯಿಷಿ ಸಲ್ಲಿಸುವಂತೆ ಮತ್ತು ನೌಕರರುಗಳಿಗೆ ವೇತನವನ್ನು ತಿಂಗಳ 05 ನೇ ತಾರೀಖಿನ ಒಳಗೆ ಪಾವತಿಸಬೇಕಿದ್ದು, 20 ನೇ ತಾರೀಖು ಬಂದರೂ ಪಾವತಿಸುತ್ತಿಲ್ಲವೆಂದು ದೂರುಗಳು ಸ್ವೀಕೃತಗೊಂಡಿರುತ್ತವೆ. ಭದ್ರತಾ ಸೇವೆಯ ಕರಾರಿನ ಕ್ರಮ ಸಂಖ್ಯೆ: 09 ರಲ್ಲಿ ಸಿಬ್ಬಂದಿಗಳ ವೇತನವನ್ನು ತಿಂಗಳ 05 ನೇ ತಾರೀಖಿನೊಳಗೆ ಪಾವತಿಸುವುದು ಕಡ್ಡಾಯವಾಗಿದ್ದು, ತಾವುಗಳು ತಿಂಗಳ 15–20 ನೇ ತಾರೀಖುಗಳಂದು ವೇತನವನ್ನು ಪಾವತಿಸುತ್ತಿರುವುದು ಕಂಡುಬಂದಿದ್ದು ಈ ಬಗ್ಗೆ ಸೂಕ್ತ ಸ್ಪಷ್ಟ ಹಾಗೂ ಸಮಜಾಯಿಷಿಯನ್ನು ಸಲ್ಲಿಸದಿದ್ದಲ್ಲಿ ಸದರಿ ಪ್ರಕರಣವನ್ನು ಕಾರ್ಮಿಕ ಇಲಾಖೆಗೆ ವರ್ಗಾಹಿಸಿ, ತಮ್ಮ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಸೇವೆಯನ್ನು ರದ್ದುಗೊಳಿಸಲಾಗುವುದೆಂದು ಅಂತಿಮವಾಗಿ ಸೂಚಿಸಲಾಗಿತ್ತು.

ಸದರಿ ಎರಡು ನೋಟೀಸ್‌ಗಳಿಗೆ ಯಾವುದೇ ಪ್ರತ್ಯೂತರವನ್ನು ಸಲ್ಲಿಸದ ಕಾರಣ ಸೇವೆಯಲ್ಲಿ ಕಂಡುಬಂದ ಲೋಪದೋಷಗಳ ಕುರಿತು ಪರಿಶೀಲಿಸಲು ಮಾನ್ಯ ಕುಲಪತಿಗಳ ಕೊಠಡಿಯಲ್ಲಿ ದಿನಾಂಕ:26.06.2023 ರಂದು ಸಭೆಗೆ ಕಡ್ಡಾಯವಾಗಿ ಏಜೆನ್ಸಿಯ ಮಾಲೀಕರಾದ ಶ್ರೀ ಸೌರವ್ ಮುಖರ್ಜಿ ರವರನ್ನು ಸೂಕ್ತ ಸಮಜಾಯಿಷಿ/ದಾಖಲೆಗಳೊಂದಿಗೆ ಹಾಜರಾಗುವಂತೆ ದಿನಾಂಕ: 23.06.2023 ರಂದು ತಿಳಿಸಲಾಗಿತ್ತು, ಸದರಿ ಸಭೆಗೆ ಉದ್ದೇಶ ಪೂರ್ವಕವಾಗಿಯೇ ಗೈರು ಹಾಜರಾಗಿ ಏಜೆನ್ಸಿಯ ಇನ್ನೊಬ್ಬ ವ್ಯಕ್ತಿಯನ್ನು ಕಳುಹಿಸಿ ಬೇಜವಾಬ್ದಾರಿಯನ್ನು ತೋರಿದ್ದು ದಿನಾಂಕ: 04.07.2023 ರಮದು ಅಂತಿಮ ನೋಟೀಸ್ ನೀಡಿ ವಿಶ್ವವಿದ್ಯಾನಿಲಯದ ಎರಡು ನೋಟೀಸ್‌ಗಳಿಗೆ ಈವರೆವಿಗೂ ಸ್ಪಂದಿಸದೇ ಇರುವುದು ಮತ್ತು ಸದರಿ ನೋಟೀಸ್‌ಗಳನ್ನು ಅಲಕ್ಷ್ಯ ಮಾಡಿ ಯಾವುದೇ ಹೇಳಿಕೆಯನ್ನು ಸಲ್ಲಿಸದೇ ಹಾಗೂ ಈ ಬಗ್ಗೆ ವಿಶ್ವವಿದ್ಯಾನಿಲಯದ ಸಂಬಂಧಪಟ್ಟ ಅಧಿಕಾರಿಗಳನ್ನು ಭೇಟಿ ಮಾಡಿ ವಸ್ತುಸ್ಥಿತಿಯನ್ನು ಸಹ ವಿವರಿಸದೇ ತಮ್ಮ ಈ ಬೇಜವಾಬ್ದಾರಿ ವರ್ತನೆಯನ್ನು ತೋರಿರುತ್ತೀರಿ, ದಿನಾಂಕ:26.06.2023 ರಂದು ನಡೆಯುವ ಸಭೆಗೆ ಕಡ್ಡಾಯವಾಗಿ ಹಾಜರಾಗುವಂತೆ ತಿಳಿಸಿದ್ದರೂ ತಾವುಗಳು ಹಾಜರಾಗಿರುವುದಿಲ್ಲ ಈ ಬಗ್ಗೆ ತಮಗೆ ಅಂತಿಮವಾಗಿ ಒಂದು ಅವಕಾಶವನ್ನು ನೀಡುವ ಸಲುವಾಗಿ ತಮ್ಮ ಸೂಕ್ತ ಹೇಳಿಕೆ/ಸಮಜಾಯಿಷಿಯನ್ನು ದಾಖಲೆಗಳೊಂದಿಗೆ ದಿನಾಂಕ:06.07.2023 ರೊಳಗೆ ಸಲ್ಲಿಸಲು ಈ ಮೂಲಕ ಅಂತಿಮವಾಗಿ ಸೂಚಿಸಲಾಗಿದೆ. ಸದರಿ ದಿನಾಂಕದೊಳಗೆ ತಾವುಗಳು ಸಮಜಾಯಿಷಿಯನ್ನು ಸಲ್ಲಿಸದಿದ್ದರೆ ತಾವು ಹೇಳುವುದು ಏನೂ ಇಲ್ಲವೆಂದು ಭಾವಿಸಿ ಟೆಂಡರ್

ಷರತ್ತು ಮತ್ತು ಕರಾರಿನ ಷರತ್ತುಗಳಂತೆ ತಮ್ಮ ಸೇವೆಯನ್ನು ಆಗಸ್ಟ್-23 ರಿಂದ ರದ್ದುಗೊಳಿಸಲು ಅಗತ್ಯ ಕ್ರಮ ಕೈಗೊಂಡು ತಾವು ಸಲ್ಲಿಸಿರುವ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದೆಂದು ಈ ಮೂಲಕ ಅಂತಿಮವಾಗಿ ಸೂಚಿಸಿ ತದನಂತರದಲ್ಲಿ ತಮ್ಮ ಯಾವುದೇ ಪತ್ರ ವ್ಯವಹಾರಗಳನ್ನು ಪರಿಗಣಿಸುವುದಿಲ್ಲವೆಂದು ತಿಳಿಸಲಾಗಿತ್ತು.

ಸದರಿ ಏಜೆನ್ಸಿಯವರು ದಿನಾಂಕ:05.07.2023 ರಂದು ಕೇವಲ ಎರಡು ಸಾಲಿನ ಸಮಜಾಯಿಷಿಯನ್ನು ಸಲ್ಲಿಸಿ ರೂ. 3000 ಗಳನ್ನು ಪಡೆಯುತ್ತಿರುವ ಬಗ್ಗೆ ಕ್ಷಮೆ ಕೋರಿ ಕೇಂದ್ರಸ್ಥಾನದಲ್ಲಿರದ ನೆಪ ನೀಡಿ ಬೆಂಗಳೂರಿಗೆ ತಲುಪಿದ ತಕ್ಷಣ ಭೇಟಿ ನೀಡುತ್ತೇನೆಂದು ತಿಳಿಸಿದ್ದರು.

ತಮ್ಮ ಪತ್ರದಲ್ಲಿ ಒಪ್ಪುವಂತಹ ಯಾವುದೇ ಹೇಳಿಕೆ/ಸಮಜಾಯಿಷಿ ಹಾಗೂ ಸಕಾರಣದ ಅಂಶಗಳು ಇರುವುದಿಲ್ಲವಾದ್ದರಿಂದ ತಮ್ಮ ಪತ್ರವನ್ನು ಒಪ್ಪಲಾಗದೆಂದು ಹಾಗೂ ಏಜೆನ್ಸಿಯ ಮಾಲೀಕರೇ ಖುದ್ದಾಗಿ ಹಾಜರಾಗಿ ವಸ್ತುಸ್ಥಿತಿಯನ್ನು ವಿವರಿಸಿ ದಾಖಲೆಗಳೊಂದಿಗೆ ಸಮಜಾಯಿಷಿಯನ್ನು ಸಲ್ಲಿಸುವಂತೆ ತಿಳಿಸಲಾಗಿದ್ದರೂ ಸಹ ಕೇಂದ್ರ ಸ್ಥಾನದಲ್ಲಿರದ ನೆಪ ನೀಡಿರುತ್ತೀರಿ. ನಿಮ್ಮ ಈ ಕಾರ್ಯವೈಖರಿಯು ಸಮಂಜಸವಾಗಿರುವುದಿಲ್ಲ. ಪ್ರಧಾನ ಉದ್ಯೋಗದಾತ ಇಲಾಖೆಯಾದ ವಿಶ್ವವಿದ್ಯಾನಿಲಯದ ಎಲ್ಲಾ ಆದೇಶ, ಸುತ್ತೋಲೆ, ಮಾರ್ಗಸೂಚಿ ಹಾಗೂ ನಿರ್ದೇಶನಗಳನ್ನು ತಪ್ಪದೇ ಪಾಲಿಸುವುದು ತಮ್ಮ ಆದ್ಯ ಕರ್ತವ್ಯವಾಗಿದ್ದು ಪ್ರತಿಯೊಂದು ಹಂತದಲ್ಲಿಯೂ ಅದನ್ನು ಉದಾಸೀನ ಮಾಡಿ ಕರಾರಿನ ಕ್ರಮ ಸಂಖ್ಯೆ: 14, 16 ಮತ್ತು 17 ನ್ನು ಸ್ಪಷ್ಟವಾಗಿ ಉಲ್ಲಂಘಿಸಿರುತ್ತೀರೆಂದು ತಿಳಿಸಿ ಏಜೆನ್ಸಿಯ ಮಾಲೀಕರು ಘಟಿಸಿರುವ ಮೇಲ್ಕಂಡ ಸೇವಾ ನ್ಯೂನ್ಯತೆಗಳ ಕುರಿತು ಸೂಕ್ತ ಹಾಗೂ ಸ್ಪಷ್ಟ ಸಮಜಾಯಿಷಿಯನ್ನು ದಿನಾಂಕ:13.07.2023 ರೊಳಗೆ ಖುದ್ದಾಗಿ ಹಾಜರಾಗಿ ಸಲ್ಲಿಸುವುದು. ತಪ್ಪಿದಲ್ಲಿ ತಮ್ಮ ಸೇವೆಯನ್ನು ಕರಾರಿನ ಕ್ರಮ ಸಂಖ್ಯೆ:16 ರನ್ವಯ ತಮ್ಮ ಸೇವೆಯನ್ನು ಜುಲೈ-23 ಕ್ಕೆ ಮುಕ್ತಾಯಗೊಳಿಸಲಾಗುವುದು. ಇದನ್ನು ಅಂತಿಮ ಅವಕಾಶವೆಂದು ತಿಳಿಯುವುದು. ಎಂದು ತಿಳಿಸಲಾಗಿತ್ತು. ಸದರಿ ಅಂತಿಮ ನೋಟೀಸ್‌ಗೆ ಯಾವುದೇ ಸಮಜಾಯಿಷಿಯು ಈವರೆವಿಗೂ ಸ್ವೀಕೃತವಾಗಿರುವುದಿಲ್ಲ. ಅಲ್ಲದೇ ದಿನಾಂಕ:20.07.2023 ರಂದು 14 ಭದ್ರತಾ ಸಿಬ್ಬಂದಿಗಳು ಮತ್ತೊಂದು ದೂರನ್ನು ಸಲ್ಲಿಸಿ ಕಡಿಮೆ ವೇತನವನ್ನು ಪಾವತಿಸಿರುವ ಬಗ್ಗೆ ಮತ್ತು ಸಮವಸ್ತ್ರಕ್ಕಾಗಿ ಹಣವನ್ನು ಕಟಾಯಿಸಿರುವ ಬಗ್ಗೆ ಮತ್ತೊಮ್ಮೆ ತಿಳಿಸಿರುತ್ತಾರೆ.

ಸದರಿ ಸಂಸ್ಥೆಯವರು ಪಾರಂಭದಿಂದಲೂ ಸೇವೆಯನ್ನು ತೃಪ್ತಿಕರವಾಗಿ ಒದಗಿಸುತ್ತಿಲ್ಲದಿರುವುದು ಕಂಡುಬಂದಿರುತ್ತದೆ, ಸದರಿ ಏಜೆನ್ಸಿಯ ವಿರುದ್ಧ ಸ್ವೀಕೃತಗೊಂಡ ದೂರುಗಳ ಬಗ್ಗೆ ಸಮಜಾಯಿಷಿಯನ್ನು ಸಲ್ಲಿಸುವಂತೆ ವಿವಿಧ ದಿನಾಂಕಗಳಂದು 04 ಬಾರಿ ನೋಟೀಸ್‌ಗಳನ್ನು ನೀಡಲಾಗಿದ್ದರು ಯಾವುದೇ ಸಮಜಾಯಿಷಿ ನೀಡಿರುವುದಿಲ್ಲ. ಭದ್ರತಾ ಸಿಬ್ಬಂದಿಗಳಿಗೆ ಸರ್ಕಾರದ ಕಾರ್ಮಿಕ ಇಲಾಖೆಯನುಸಾರ ನೀಡಬೇಕಾದ ಎಲ್ಲಾ ಸೌಲಭ್ಯಗಳನ್ನು ನೀಡುವುದು ಏಜೆನ್ಸಿಯ ಜವಾಬ್ದಾರಿಯಾಗಿದ್ದು ಸಿಬ್ಬಂದಿಗಳಿಗೆ ನೀಡಬೇಕಾದ ಸೌಲಭ್ಯಗಳನ್ನು ಒದಗಿಸದೇ ಇರುವುದು ಮತ್ತು ಅವರಿಗೆ ಕಿರುಕುಳ ನೀಡುತ್ತಿರುವುದು ಸ್ವೀಕೃತಗೊಂಡ ದೂರುಗಳಿಂದ ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಅಲ್ಲದೇ ಗಾರ್ಡ್‌ಗಳಿಗೆ ಸರಿಯಾದ ಕರ್ತವ್ಯವನ್ನು ಹಂಚಿಕೆ ಮಾಡದೇ ಹೆಚ್ಚುವರಿಯಾಗಿ ಕೂರಿಸಿಕೊಂಡು ಅವರಿಗೆ ತೊಂದರೆ ಉಂಟು ಮಾಡುತ್ತಿದ್ದು ಇದರಿಂದ ವಿಶ್ವವಿದ್ಯಾನಿಲಯದ ಆವರಣದಲ್ಲಿ ಕಾವಲು ಕಾಯುವ ಪಹರೆಯಲ್ಲಿ ಸಿಬ್ಬಂದಿಗಳ ಕೊರತೆ ಇದ್ದು ವಿಶ್ವವಿದ್ಯಾನಿಲಯಕ್ಕೆ ತೊಂದರೆಯಾಗುತ್ತಿದೆ.

ಸದರಿ ಏಜೆನ್ಸಿಯು ಟೆಂಡರ್ ಷರತ್ತು 5.4 ಮತ್ತು 5.5 ರನ್ವಯ ಕಾರ್ಮಿಕ ಇಲಾಖೆಯು ನಿಗದಿಪಡಿಸಿರುವ ವೇತನವನ್ನು ಮತ್ತು ಇತರೆ ಸೇವಾ ಸೌಲಭ್ಯಗಳನ್ನು ಕಡ್ಡಾಯವಾಗಿ ನೀಡಬೇಕಿದ್ದು ಅದನ್ನು ಉಲ್ಲಂಘಿಸಿರುತ್ತಾರೆ. ಟೆಂಡರ್ ಷರತ್ತಿನ 5.10 ಮತ್ತು 5.27 ರನ್ವಯ ಕಾರ್ಮಿಕರಿಗೆ ಒದಗಿಸಬೇಕಾದ ಸೇವಾ ಸೌಲಭ್ಯಗಳನ್ನು ಒದಗಿಸಿರುವುದಿಲ್ಲ. ಷರತ್ತಿನ 5.32 ರನ್ವಯ ವಿಶ್ವವಿದ್ಯಾನಿಲಯದ ಆದೇಶ/ಸೂಚನೆಗಳನ್ನು ಪಾಲಿಸಿರುವುದಿಲ್ಲ. ಷರತ್ತಿನ 5.38 ರನ್ವಯ ತಿಂಗಳ 05 ನೆ ತಾರೀಕಿನ ಒಳಗೆ ವೇತನವನ್ನು ಪಾವತಿಸಬೇಕಿದ್ದು ಪಾವತಿಸಿರುವುದಿಲ್ಲ. ಷರತ್ತಿನ 5.47 ರಲ್ಲಿ ಸೇವೆಯಲ್ಲಿ ನ್ಯೂನ್ಯತೆ ಕಂಡುಬಂದಲ್ಲಿ ಭದ್ರತಾ ಠೇವಣಿಯನ್ನು ಮುಟ್ಟು ಗೋಲು ಹಾಕಿಕೊಳ್ಳಲಾಗುವುದೆಂದು ತಿಳಿಸಲಾಗಿದೆ. ಷರತ್ತಿನ 5.50 ರಲ್ಲಿ ಕುಲಸಚಿವರು ಏಜೆನ್ಸಿಯಲ್ಲಿ ಕಂಡು ಬಂದ ನಿಯಮಗಳ ಉಲ್ಲಂಘನೆ ಮತ್ತು ಲೋಪಗಳಿಗೆ ಎರಡು ಕ್ಯಾಲೆಂಡರ್ ತಿಂಗಳ ಮುಂಚಿತವಾಗಿ ನೋಟೀಸ್ ನೀಡಿ ಸೇವೆಯನ್ನು ರದ್ದುಪಡಿಸಲು ಅಧಿಕಾರವಿರುತ್ತದೆ, ಇದು ಮಾನ್ಯ ಕುಲಪತಿಗಳ ಅಂತಿಮ ತೀರ್ಮಾನಕ್ಕೆ ಒಳಪಟ್ಟಿರುತ್ತದೆ. ಅಲ್ಲದೇ ಸೇವಾ ಕರಾರಿನ ಷರತ್ತು 16 ರಲ್ಲಿ ತೃಪ್ತಿದಾಯಕ ಸೇವೆಯನ್ನು ನೀಡದಿದ್ದಲ್ಲಿ ಸೇವೆಯನ್ನು ರದ್ದುಪಡಿಸಿ ಅದನ್ನು ಬೇರೆ ಏಜೆನ್ಸಿಗೆ ವಹಿಸಲು ಅವಕಾಶವಿರುತ್ತದೆ, ಷರತ್ತಿನ 17 ರಲ್ಲಿ ವಿಶ್ವವಿದ್ಯಾನಿಲಯದ ಸಲಹೆ/ಸೂಚನೆ/ಆದೇಶ ಗಳನ್ನು ಪಾಲಿಸಬೇಕಾಗಿದ್ದು ಅದನ್ನು ಪಾಲಿಸಿರುವುದಿಲ್ಲ.

ವಿಶ್ವವಿದ್ಯಾನಿಲಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸೇವೆಯನ್ನು ನೀಡುತ್ತಿರುವ ಮೆ. ಸಿ.ಐ.ಎಸ್ ಬ್ಯೂರೋಸ್ ಫೆಸಿಲಿಟಿ ಪ್ರೈ.ಲಿ, ಬೆಂಗಳೂರು ರವರ ಸೇವೆಯಲ್ಲಿ ಕಂಡುಬಂದಿರುವ ನ್ಯೂನ್ಯತೆಗಳ ಕುರಿತು ವಿಷಯವನ್ನು ಸಿಂಡಿಕೇಟ್ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2023–24 ವಿ.ಸಿ: 04 :ಸಾ&ಖ : ದಿನಾಂಕ:21.07.2023 |
|---|---|

**ವಿಷಯ: ಕುಮಾರವ್ಯಾಸ ಭಾರತ ಎಂಬ ಕರ್ಣಾಟಕ ಭಾರತ ಕಥಾ ಮಂಜರಿ ಕೃತಿಯ ಎರಡು ಸಂಪುಟಗಳ ವಿಲೇವಾರಿ ಕುರಿತು.**

*****

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ ಕುಮಾರವ್ಯಾಸ ಅಧ್ಯಯನ ಪೀಠ ಮತ್ತು ಕನ್ನಡ ಗಣಕ ಪರಿಷತ್ ಬೆಂಗಳೂರು ಇವರ ಸಹಯೋಗದೊಂದಿಗೆ ಪ್ರಕಟಿಸಿರುವ ಕುಮಾರವ್ಯಾಸ ಭಾರತ ಎಂಬ ಕರ್ಣಾಟಕ ಭಾರತ ಕಥಾ ಮಂಜರಿ ಕೃತಿಯ 80 ಪ್ರತಿಗಳು ಲಭ್ಯವಿದ್ದು, ಎರಡು ಸಂಪುಟಗಳನ್ನೊಳಗೊಂಡಂತೆ ಒಂದು ಕೃತಿಯ ಬೆಲೆ ರೂ. 2000/–ಗಳಾಗಿದ್ದು, ಸದರಿ ಕೃತಿಯ ಒಂದು ಪ್ರತಿ(02 ಸಂಪುಟ) 50% ರಿಯಾಯತಿ ದರದಂತೆ ವಿಲೇವಾರಿ ಮಾಡುವ ಸಂಬಂಧ ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.